ಹೋಗುತ್ತಿದೆ. ಆದ್ದರಿಂದ ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಿ, ಅಲ್ಲಿ ಎಲ್ಲರೂ ಸೇರಿಕೊಂಡು ವಿಚಾರಮಾಡೋಣ ಎಂದರೆ ತಾವು ಒಪ್ಪುತ್ತಿಲ್ಲ. ಈ ನಿಲುವನ್ನು ತಾವು ಏತಕ್ಕೆ ತೆಗೆದುಕೊಂಡಿದ್ದೀರಿ ಎಂಬುದು ನಮಗೆ ಅರ್ಥವಾಗುತ್ತಿಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ತಾವು ರಾಷ್ಟ್ರೀಕರಣ ಮಾಡುವುದಕ್ಕೆ ತಮ್ಮಿಂದ ಸಾಧ್ಯವಿಲ್ಲವೆಂದರೆ ನಾವೇ ರಾಷ್ಟ್ರೀಕರಣ ಮಾಡಬೇಕಾಗುತ್ತದೆ, ೧೯೮೨ರಲ್ಲಿ ನಾವು ಮಾಡಿ ತೋರಿಸಿದ್ದೇವೆ. ಇವರು ಈ ಗ್ಯಾನೈಟ್ ಕಲ್ಲನ್ನು ಯಾವ ರೀತಿ ಮಂಗಳೂರು ಬಂದರಿಗೆ ತೆಗೆದುಕೊಂಡು ಹೋಗುತ್ತಾರೆಂಬುದನ್ನು ನಾವು ನೋಡುತ್ತೇವೆ, ಆ ಲಾರಿಗಳನ್ನು ತಡೆಯುವಂಥ ಚಳುವಳಿ ಪ್ರಯತ್ನ ಮಾಡುತ್ತೇವೆ ಎಚ್ಚರಿಕೆಯಿಂದಿರಿ ಎಂದು ತಮ್ಮ ಮಾಹಿತಿಗಾಗಿ ಸರ್ಕಾರಕ್ಕೆ ಎಚ್ಚರಿಸುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ. ಇದರ ಬಗ್ಗೆ ಸಾಕಷ್ಟು ಉತ್ತರ ಹೇಳಿದ್ದೇನೆ. ಮೂರೂ ವರ್ಷಗಳಲ್ಲಿ ೮೭,೮೯,೯೯ರಲ್ಲಿ ಈ ಕರ್ನಾಟಕದ ಮಾಜಿ ಮುಖ್ಯಮಂತ್ರಿಯಾದ ಶ್ರೀ ರಾಮಕೃಷ್ಣ ಹೆಗಡೆಯವರು ಒಂದು ಮೀಟಿಂಗ್ ಮಾಡಿದ್ದರು, ಅಂದಿನ ಮಂತ್ರಿಗಳಾದ ಶ್ರೀ ರಮೇಶ್ ಜಿಗಜಿಣಗಿಯವರು ಫೈಲ್‌ನಲ್ಲಿ ಬರೆದು ಹೋದರು. ನಾವು ಕೂಡ ಗ್ಯಾನೈಟ್ ಬಗ್ಗೆ ಇರುವ ನಿಯಮವನ್ನು ಲಿಬರ್‌ಲೈಸ್ ಮಾಡಬೇಕು, ರೂಲ್ಸ್ ಚೇಂಜ್ ಮಾಡಬೇಕೆಂದು ಹೇಳಿಕೊಂಡು ಹೋದರು. ನಂತರ ಪ್ರೆಸಿಡೆಂಟ್ ರೂಲ್‌ನಲ್ಲಿ ಇದರ ಬಗ್ಗೆ ಎಲ್ಲ ಪೇಪರ್‌ನಲ್ಲಿ ಬಂತು. ಏನೆಂದರೆ ಗ್ಯಾನೈಟ್ ಪಾಲಿಸಿ ಬದಲಾವಣೆ ಆಗುತ್ತದೆ, ಲಿಬರ್‌ಲೈಸ್ ಆಗುತ್ತದೆ ಎಂದು ಆದರೆ ರಾಜ್ಯಪಾಲರು ಎಲೆಕ್ಷನ್‌ನ ಮುಂಚೆ ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಡವು ಸರಿಯಲ್ಲ. ಪಾಪ್ಯುಲರ್ ಗೌರ್ನಮೆಂಟ್ ಬಂದು ಡಿಸಿಷನ್ ತೆಗೆದುಕೊಳ್ಳಲಿ ಎಂದು ಹೇಳಿದರು. "ಬಿಲ್ಲಿ ಸೌಚೂಪೇ ಕಾಟ್‌ಕೇ ಹಜ್‌ತೋ ಚಲೆ ಗಯೆ" ಇದರ ಅರ್ಥ ಬೆಕ್ಕು ನೂರು ಇಲಿಗಳನ್ನು ತಿಂದು ಹಜ್‌ಗೆ ಹೊರಟು ಹೋಯಿತಂತೆ, ಅದರಂತೆ ಮೂರು ವರ್ಷಗಳಿಂದ ಈ ಬಗ್ಗೆ ನಡೆದಂತಹ ಕಾಗದ ಪತ್ರಗಳೆಲ್ಲ ಇದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ಶ್ರೀ ಶಿವಣ್ಣನವರು ಈ ತೀರ್ಮಾನವನ್ನು ತೆಗೆದುಕೊಂಡು ವಿದೇಶದ ಯಾತ್ರೆಗೆ ಹೋಗುತ್ತಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ. ಈ ಗ್ಯಾನೈಟ್ ವ್ಯವಹಾರ ಪ್ರಾರಂಭವಾದದ್ದು ಏಪ್ರಿಲ್ ೧೯೮೩ರಲ್ಲಿ ಎಂಬುದನ್ನು ನೀವು ಮರೆಯಬೇಡಿ.

ಶ್ರೀ ಪಿ ಜಿ. ಆರ್. ಸಿಂಧ್ಯಾ.—ಇದರ ಬಗ್ಗೆ ವಿಚಾರಣೆ ನಡೆಯಲಿ, ತಪ್ಪಿತಸ್ಥರು ಯಾರಿದ್ದಾರೆ ಅವರಿಗೆ ಶಿಕ್ಷೆ ಮಾಡಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ನಮ್ಮ ಶಂಕೆಗೆ ಆಧಾರ ಇದೆ. ಇವರ ಉತ್ತರವನ್ನು ನಮ್ಮ ಪಕ್ಷದ ಮತಿಯಿಂದ ನಾವು ಒಪ್ಪಲಂ ಸಾಧ್ಯವಿಲ್ಲ. ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಲೇಬೇಕು ಆದಕ್ಕೆ ಒಪ್ಪದಿದ್ದರೆ ಈ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಜನತಾ ದಳ ಸದಸ್ಯರು ಜನತಾ ಪಕ್ಷದ ಒಬ್ಬರು ಸದಸ್ಯರು ಹಾಗೂ ರೈತಸಂಘದ ಸದಸ್ಯರುಗಳು ಹಾಗೂ ಪಕ್ಷೇತರ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ರುಕ್ಮಯ್ಯ ಪೂಜಾರಿ.—ಮಾನ್ಯ ಅಧ್ಯಕ್ಷರೆ, ಈ ಗ್ಯಾನೈಟ್ ವಿಚಾರದಲ್ಲಿ ಖಂಡಿತಾ ಸದನದ ಒಂದು ಸಮಿತಿಯನ್ನು ಮಾಡುವುದರ ಮೂಲಕ ಸತ್ಯಸಂಗತಿಯನ್ನು ತಿಳಿಯುವುದು ತುಂಬಾ ಅಗತ್ಯವಿದೆ. ನಮ್ಮ ರಾಜ್ಯದ ಸಂಪತ್ತು ದರೋಡೆಯಾಗುತ್ತಿದೆ. ಅದಲ್ಲದೆ ಪ್ರಕೃತಿಯ ಸೌಂದರ್ಯ ಹಾಳಾಗುತ್ತಿದೆ. ಖಂಡಿತಾ ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಬೇಕು. ಇಲ್ಲದಿದ್ದರೆ ನಾವು ಕೂಡ ಸಭಾತ್ಯಾಗದಲ್ಲಿ ಪಾಲುಗಾರರಾಗುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ರುಕ್ಮಯ್ಯ ಪೂಜಾರಿಯವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ. – ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರುವುದು ಏನೆಂದರೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಈ ವಿಚಾರದ ಬಗ್ಗೆ ಜನರು ಬೀದಿಯಲ್ಲಿ ಮಾತನಾಡುತ್ತಿದ್ದಾರೆ. ಮೊದಲು ೩ ಕೋಟಿ ರೂಪಾಯಿ ಈ ವ್ಯಾಪಾರ